◆ ಕತೆ ಹೇಳುವುದನ್ನು ಕಲಿತದ್ದು ಎಲ್ಲಿಂದ?

ನನ್ನಮ್ಮನಿಂದ, ನನ್ನಪ್ಪನಿಂದ ಮತ್ತು ನನ್ನಕ್ಕನಿಂದ.

ಬಯಲುಸೀಮೆಯ ಹಳ್ಳಿಗಾಡಿನ ಅಪ್ಪಟ ಅನಕ್ಷರಸ್ಥ ಅಮ್ಮನ ಬಳಿ ಕತೆಯ ಭಂಡಾರವೇ ಇತ್ತು. ಮಹಾಭಾರತ, ರಾಮಾಯಣ, ನಳದಮಯಂತಿ, ಹೀಗೆ ನೂರೆಂಟು ಪುರಾಣದ ಕತೆಗಳು ಮಾತ್ರವಲ್ಲ, ಈ ಮಣ್ಣಿನ ಗ್ರಾಮ್ಯ ದೇವರುಗಳ ಕತೆಗಳೂ ಇದ್ದವು. ಈ ಹಲವು ಕತೆಗಳನ್ನು 'ಯಾದ್ ವಶೇಮ್'ನಲ್ಲಿ ಗುಂಡಮ್ಮನ ಬಾಯಲ್ಲಿ ಹೇಳಿಸಿದ್ದೀನಿ.

ನನ್ನ ಎಳೆಯ ವಯಸ್ಸಿನಲ್ಲಿ ಅಮ್ಮ ಹೇಳುತ್ತಿದ್ದ ಗುಂಣಯ್ಯ, ಕರಿಯಪ್ಪ, ತಿಮ್ಮಪ್ಪ, ಓಬವ್ವನ ಕತೆಗಳು ಈಗಲೂ ನನಗೆ ನೆನಪಿವೆ. 'ನಮ್ಮ ಮನೆ ದೇವರು ಯಾಮಾತಿ ಎಂಜೇರಪ್ಪ, ನಮ್ಮದು ಕಾದಮುದ್ದಿ ವಂಶ' ಎಂದಾಗ ವಿವರ ತಿಳಿಯುವ ಗೋಜಿಗೆ ಹೋಗಿರಲಿಲ್ಲ. ಅಮ್ಮನ ತವರು ಹೇಮಾವತಿಯು, ನೊಳಂಬರ ರಾಜಧಾನಿಯಾಗಿ ಮೆರೆದ 'ಹೆಂಜೇರು'. ಹೆಂಜೇರು ಅರಸರ ಮನೆದೇವರಾದ ಈಶ್ವರನ ಮತ್ತೊಂದು ಹೆಸರೇ ಹೆಂಜೇರಪ್ಪ ಎಂದೆಲ್ಲ ಅರ್ಥವಾದದ್ದು ಚರಿತ್ರೆಯ ಪುಟಗಳಲ್ಲಿ ಹುಡುಕಿ ಹೊರಟಾಗ. ಈ ನೆಲದ ಹೆಣ್ಣುಮಕ್ಕಳ ಧೈರ್ಯ, ಗಟ್ಟಿತನ, ದುಡಿಮೆ, ಶ್ರಮಜೀವನದಲ್ಲಿ ನಂಬುಗೆ, ಅದರೊಡನೆಯೇ ಹೃದಯವಂತಿಕೆ, ಮರುಗುವ ಸ್ವಭಾವ ಇವೆಲ್ಲಾ ಗುಂಡಮ್ಮನ ಪಾತ್ರವಾಗಿ ನನ್ನ ಕಾದಂಬರಿ 'ಯಾದ್ ವಶೇಮ್'ನಲ್ಲಿ ಮೂಡಿಬಂದವು. ಈ ನೆಲದ ಹೆಣ್ಣುಮಕ್ಕಳ ಬಾಯಿಂದ ಬಾಯಿಗೆ ಹಾದ ಜನಪದ ಕತೆಗಳನ್ನು, ಅವುಗಳಲ್ಲಿಯ ಅಪ್ಪಟ ಮಾನವೀಯ ಅಂಶಗಳನ್ನು ಹೆಣೆಯುತ್ತಾ ಹೊರಟೆ.

ಮನೆಯಲ್ಲಿ ಮಹಾಭಾರತದ ಕತೆ ಅದೆಷ್ಟೋ ಬಾರಿ ಕೇಳುತ್ತಾ ಇದ್ದೆವು. ಒಂದೆಡೆ ಧರ್ಮವನ್ನು ಸಂಕೇತಿಸಿದ ಪಾಂಡವರು. ಇನ್ನೊಂದೆಡೆ ದುರಹಂಕಾರದ ದುರ್ಯೋಧನ. ಅಣ್ಣತಮ್ಮಂದಿರ ನಡುವೆ ಮಾರಣ ಯುದ್ಧ. ಕತೆ ಮುಗಿದಾಗ 'ಅಮ್ಮ ಅಂತೂ ಕೊನೆಗೆ ಪಾಂಡವರು ಗೆದ್ದರಲ್ವ?' ಬಾಲ್ಯದ ಉತ್ಸಾಹದಿಂದ ಕೇಳುತ್ತಿದ್ದೆವು. ಅಮ್ಮ ಹೇಳ್ತಾ ಇದ್ಲು 'ಯುದ್ಧದಲ್ಲಿ ಯಾರಾದ್ರೂ ಗೆದ್ದೋರುಂಟಾ. ಪಾಂಡವ್ರು ಏನಾ ಗೆದ್ರು... ವಿಧವೆರೂ, ಅನಾಥ್ ಮಕ್ಳೂ ತುಂಬ್ ಹೋದ ರಾಜ್ಯದಾಗ, ತಮ್ ನೆಂಟ್ರು ಇಷ್ಟ್ರು ಮಕ್ಳೂ ಎಲ್ಲ ಕಳಕೊಂಡು ಯಾವ ಸುಖ ಸುರಕೊಂಡ್ರು...?'

ಅದೆಷ್ಟೋ ವರ್ಷಗಳ ನಂತರ ವಾಷಿಂಗ್ಟನ್‌ನ 'ಹೊಲೊಕಾಸ್ಟ್ ಮ್ಯೂಸಿಯಂ'ನಲ್ಲಿ, ನೊಬೆಲ್ ಶಾಂತಿ ಪುರಸ್ಕಾರ ಪಡೆದ ಎಲೀ ವೀಸಲ್ ಅವರ ನೊಬೆಲ್ ಭಾಷಣ ಓದುತ್ತೇನೆ, ಅಲ್ಲಿ ಬರೆದಿತ್ತು– **'In war there are no victors, only victims'**, 'ಯುದ್ಧದಲ್ಲಿ ಗೆದ್ದವರಿಲ್ಲ... ಬರೀ ಸಂತ್ರಸ್ತರು.'

ನನ್ನ ತಂದೆಯವರು ಕುವೆಂಪು ಶಿಷ್ಯರು. ಅಪ್ಪನ ಸಾಹಿತ್ಯದ ಒಲವು ಮನೆಮಂದಿಗೆಲ್ಲ ಪಸರಿಸಿತ್ತು. ಬಟ್ಟೆಬರೆಗೆ ಹಣ ವ್ಯರ್ಥ ಎಂದು ಭಾವಿಸಿದ್ದ ಅಪ್ಪ, ಮನೆಯ ತುಂಬಾ ಸಾವಿರ ಸಾವಿರ ಪುಸ್ತಕಗಳನ್ನು ಕೊಂಡು ತುಂಬಿದ್ದರು. ನನ್ನನ್ನು ಲೇಖಕಿಯಾಗಿ ಬೆಳೆಸಿದ್ದು ಈ ಸಾವಿರ ಸಾವಿರ ಪುಸ್ತಕಗಳು. ಅವುಗಳಲ್ಲಿ ಅರ್ಧ ಕೂಡಾ ಓದಿಲ್ಲದ ನಾನೂ ಲೇಖಕಿಯಾದೆ. ಕುವೆಂಪು, ಬೇಂದ್ರೆ, ಬಿ.ಎಂ.ಶ್ರೀ ಅವರ ಕವನಗಳನ್ನು ಕೇಳುತ್ತಾ ನಾನು ಬೆಳೆದೆ. ಶೇಕ್ಸ್‌ಪಿಯರ್, ಬರ್ನಾರ್ಡ್ ಶಾ, ಬ್ರಾಂಟೆ, ಶೆಲ್ಲಿ, ಕೀಟ್ಸ್, ವರ್ಡ್ಸ್‌ವರ್ತ್ ಎಲ್ಲರ ಪರಿಚಯ ಅಪ್ಪನ ಈ ಗ್ರಂಥಾಲಯದಲ್ಲಿ ನನಗಾಗಿತ್ತು.

ನನ್ನಕ್ಕ ನನಗಿಂತ ಒಂಬತ್ತು ವರ್ಷಕ್ಕೆ ಹಿರಿಯಳು. 'ನ್ಯೂಕ್ಲಿಯರ್ ಫಿಸಿಕ್ಸ್'ನಲ್ಲಿ ಎಂ.ಎಸ್ಸಿ. ಮಾಡಿದ ಆಕೆ, ಸಾಹಿತ್ಯದಲ್ಲಿ ಉತ್ಕಟ ಪ್ರೀತಿ ಉಳ್ಳವಳು. ತಾನು ಓದಿದ ಪುಸ್ತಕಗಳನ್ನು, ಕಂಡ ಘಟನೆಗಳನ್ನು ರಸವತ್ತಾಗಿ ವಿವರಿಸುವಳು. ಇಂತಹ ಪರಿಸರದಲ್ಲಿ ಬೆಳೆದ ನನಗೆ ಕತೆ ಹೇಳುವುದು, ಕತೆ ಬರೆಯುವುದು ತೀರಾ ಸಹಜವಾಗಿ ಹರಿದು ಬಂತು.